ಊರಿಗೆ ಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ, ಆದರೆ ಏನೂ ಮಾಡಲಾಗಿಲ್ಲ. "ನೀವು ಬೆಂಗಳೂರಿನಲ್ಲಿ ಏನಾದರೂ ಮಾಡಲಾದೀತೋ?'' ಎಂದು ಬಸ್ಸಿನಲ್ಲಿ ಹೋಗುವಾಗ ಕೇಳಿದರು. "ನೋಡಬೇಕು, ನೀವು ಮಾಡಿರುವ ಪತ್ರ ವ್ಯವಹಾರದ ವಿವರ ಕೊಟ್ಟಿರಿ'' ಎಂದೆ.

ರಾತ್ರಿ ಒಂಬತ್ತೂವರೆ ಸುಮಾರಿಗೆ ತ್ಯಾಗನಹಳ್ಳಿಯಲ್ಲಿಳಿದಾಗ ಆ ಜಾಗ ಊರೆಂದು ಗುರುತಿಸಲು ಇದ್ದ ಒಂದೇ ಸಂಕೇತವೆಂದರೆ ದೇವಸ್ಥಾನದ ಮುಂದುಗಡೆ ಇದ್ದ ದೀಪ. "ಹುಷಾರಾಗಿ ಇಳಿಯಿರಿ'' ಎನ್ನುತ್ತಾ ಶಾಸ್ತ್ರಿಗಳು ಮೂರು ಸೆಲ್ಲಿನ ಬ್ಯಾಟರಿ ತೆಗೆದು ಬೆಳಕು ಹೊಮ್ಮಿಸಿದರು. ಇಷ್ಟು ಹೊತ್ತೂ ಶಾಸ್ತ್ರಿಗಳ ಮನೆಯಲ್ಲಿ ಯಾರ್ಯಾರಿದ್ದಾರೆ ಎಂದೂ ಕೇಳಿರಲಿಲ್ಲ. "ಈ ಅಡ್ಡ ಹೊತ್ತಿನಲ್ಲಿ ಬಂದು ನಿಮ್ಮ ಮನೆಯ ಹೆಣ್ಣುಮಕ್ಕಳಿಗೆ ಅಡುಗೆ, ಊಟ ಎಂದು ನಾನು ತೊಂದರೆ ಕೊಡುವಂತಾಯಿತಲ್ಲ'' ಎಂದೆ. "ಆ ಯೋಚನೆಯೇ ನಿಮಗೆ ಬೇಡ. ನಮ್ಮ ಮನೆಯಲ್ಲಿ ನನ್ನನ್ನು ಬಿಟ್ಟರೆ ಇನ್ಯಾರೂ ಇಲ್ಲ'' ಎಂದರು. "ನಿಮ್ಮ ಮದುವೆ...'' ಅನ್ನುವ ಮೊದಲೇ "ಇಲ್ಲ, ನಾನು ಮದುವೆ ಆಗಲೇ ಇಲ್ಲ'' ಎಂದರು. ಲಗುಬಗೆಯಿಂದ ನಡೆಯುತ್ತ ದಣಪೆ ದಾಟಿ ಬದಿಕಿಸೆಯಿಂದ ಕೀಲಿಕೈ ಹುಡುಕಾಡಿ ತೆರೆದರು. "ಬನ್ನಿ, ಬನ್ನಿ, ಕುಳಿತುಕೊಳ್ಳಿ'' ಎಂದು ಚಾಪೆ, ಕಂಬಳಿ ಹಾಸಿದರು. "ಕೈ ಕಾಲು ತೊಳೆದು ಬನ್ನಿ, ಅಷ್ಟರಲ್ಲಿ ಅಡುಗೆ ಸಿದ್ಧತೆ ಮಾಡುತ್ತೇನೆ'' ಎನ್ನುತ್ತಾ ನನಗೆ ಮಾತಿಗೆ ಅವಕಾಶವನ್ನೇ ಕೊಡದೆ, "ಗಜವದನಾ ಹೇರಂಭ...'' ಎಂದು ಯಕ್ಷಗಾನದ ಗಣೇಶ ಸ್ತುತಿಯನ್ನು ಹೇಳುತ್ತಾ ಮುಂದಿನ ಅಂಕಕ್ಕೆ ಸಿದ್ಧರಾದರು.

'ಇನ್ನು ಸಂಕೋಚಕ್ಕೆ ಕಾರಣವೂ ಇಲ್ಲ, ಅರ್ಥವೂ ಇಲ್ಲ' ಎಂದುಕೊಳ್ಳುತ್ತ ಬಟ್ಟೆ ಬದಲಿಸಿ ನಾನೂ ಅವರ ಮನೆಯ ದೈನಿಕಕ್ಕೆ ಹೊಂದಿಕೊಳ್ಳತೊಡಗಿದೆ. ಮುಖ ತೊಳೆದು ಬಂದು ಕಣ್ಣು ಮುಚ್ಚಿ ಏನೋ ಯೋಚಿಸುತ್ತ ಕುಳಿತಿದ್ದಂತೆ ವಿದ್ಯುತ್ ಬಂತು. ಪುಟ್ಟ ಬಲ್ಬಿನ ಬೆಳಕಲ್ಲಿ ಮನೆಯನ್ನು ನೋಡತೊಡಗಿದೆ. ಚರಕಾದ ಮುಂದೆ ನೂಲುತ್ತ ಕುಳಿತ ಮಹಾತ್ಮ, ಚಿತ್ರಕ್ಕೆ ಬೆನ್ನು ಹಾಕಿ ಅಂತ್ಯವಿಲ್ಲದ ಹಾದಿಯಲ್ಲಿ ಸಾಗುತ್ತಿರುವ ನೆಹರೂ, ಪರಿಚಯವಿರದ ಒಬ್ಬ ಸಾಧುಗಳ ಕಂದಿದ ಬಣ್ಣದ ಚಿತ್ರ ಇವಿಷ್ಟು ಹೊರಜಗುಲಿಯ ಗೋಡೆಯನ್ನು ಅಲಂಕರಿಸಿದ್ದವು. ಮನೆ ಹೊರಗೆ ಪುಟ್ಟದಾಗಿ ರಂಗೋಲಿ. ಬೆಳಗ್ಗೆ ಹಾಕಿದ್ದಿರಬೇಕು ಅಂದುಕೊಂಡೆ. ಗಾಳಿಗೆ ಶೇಡಿ ಅಷ್ಟಿಷ್ಟು ಹರಡಿದಂತೆ ಕಂಡಿತಷ್ಟೆ, ಉಳಿದಂತೆ ಈಗ ತಾನೇ ಬರೆದ ರಂಗೋಲಿ ಎಂಬಂತಿದೆ. 'ಈ ಶಾಸ್ತ್ರಿಗಳು ಏಕಾಕಿಯಾದರೂ ಯಾವ ಪದ್ಧತಿಯನ್ನೂ ಬಿಟ್ಟವರಲ್ಲ' ಎಂದುಕೊಂಡೆ.

ಅನ್ನಕ್ಕಿಟ್ಟು ದೇವರ ದೀಪ ಹಚ್ಚಿದರು. ಮನೆ ಹಿತ್ತಲಲ್ಲಿ ಬೆಳೆದಿದ್ದು ಎಂದು ಚಿಕ್ಕು ಹಣ್ಣುಗಳನ್ನು ತಂದಿಟ್ಟರು. ಕೊಟ್ಟಿಗೆಗೊಮ್ಮೆ ಹೋಗಿ ಬರುವೆ ಎಂದು ಹೊರಟವರು ವಾಪಸ್ಸು ಬಂದು 'ಕಣ್ಣಾಡಿಸುತ್ತಿರಿ' ಎಂದು ಒಂದು ಕೈ ಬರಹದ ಪುಸ್ತಕ ಕೊಟ್ಟು ಹೋದರು. ಅವರು ಹೇಳಿದಂತೆ ಕಣ್ಣಾಡಿಸಿದೆ. ಓದುವಷ್ಟು ಉತ್ಸಾಹವೇನೂ ಇರಲಿಲ್ಲ. ಚಾಪೆ ಹಾಸಿಕೊಂಡು ಅಡ್ಡಾಗಿ ಸುಮ್ಮನೇ ಪುಟ ತಿರುಗಿಸಿದೆ. ಮುದ್ದಾದ ಅಕ್ಷರಗಳಲ್ಲಿ ಕೆಲವು ಪದ್ಯಗಳು, ಮನಸಿನ ಹೊಳಹುಗಳು, ಟಿಪ್ಪಣಿಗಳು, ಇಷ್ಟವಾದ ಸೂಕ್ತಿಗಳು ಎಲ್ಲವನ್ನೂ ಬರೆದಿಟ್ಟಿದ್ದರು. ಇವನ್ನೆಲ್ಲ ನಾನೇಕೆ ಓದಬೇಕೋ ಅಂದುಕೊಳ್ಳುತ್ತ ಅಲ್ಲೇ ನಿದ್ದೆ ಹೋದೆ.



ಮುಕ್ಕಾಲು ಗಂಟೆಯೇ ಮಲಗಿಬಿಟ್ಟೆ ಎಂದು ತೋರುತ್ತದೆ. ಶಾಸ್ತ್ರಿಗಳು ಮೈ ಅಲುಗಿಸಿ ಸಣ್ಣ ದನಿಯಲ್ಲಿ, "ಊಟ ಮಾಡೋಣವೇ?'' ಎಂದಾಗಲೇ ಎಚ್ಚರವಾದದ್ದು. ಅಷ್ಟು ಹಿರಿಯರು ನನಗಾಗಿ ಅಡುಗೆ ಸಿದ್ಧತೆ ನಡೆಸಿರುವಾಗ ನಾನು ಮಲಗಿಬಿಟ್ಟಿದ್ದೆನಲ್ಲ ಅನ್ನಿಸಿ ನಾಚಿಕೆಯಾಯಿತು. ಎದ್ದು ಕೂತೆ.

ಬಾಳೆಎಲೆಗೆ ಉಪ್ಪು, ಉಪ್ಪಿನಕಾಯಿ ಬಡಿಸಿ ತಾವೂ ನನ್ನೊಡನೆ ಊಟಕ್ಕೆ ಕೂತರು.